UASB LIBRARY
Jai Kisan
Agri Newspaper Clippings
Saturday 08-07-2023
Pg. 1

08-07-2023
Vijayavani Pg 08

ಶೂನ್ಯ, ಶೇ. 3ರ ಬಡ್ಡಿ ದರದ ಸಾಲ ಮಿತಿ ಹೆಚ್ಚಳ | 35 ಲಕ್ಷ ರೈತರಿಗೆ ₹25 ಸಾವಿರ ಕೋಟಿ ಸಾಲ ವಿತರಣೆ ಗುರಿ

ಕೃಷಿಕರಿಗೆ ತೆರೆಯಿತು ಭಾಗ್ಯದ ಬಾಗಿಲು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕೃಷಿಕರನ್ನು ಆರ್ಥಿಕ ಸಬಲೀಕರಣರನ್ನಾಗಿಸಲು ಪೂರಕವಾಗಿ ಶೂನ್ಯಬಡ್ಡಿ ದರದ ಬೆಳೆ ಸಾಲ ಮತ್ತು ಶೇ. 3ರ ಬಡ್ಡಿ ದರದ ಸಾಲಮಿತಿ ಹೆಚ್ಚಳ ಮಾಡಲಾಗಿದೆ. ಈ ಉದ್ದೇಶಕ್ಕೆ ಒಟ್ಟು 25 ಸಾವಿರ ಕೋಟಿ ರೂ ನಿಗದಿಪಡಿಸಲಾಗಿದ್ದು, 35 ಲಕ್ಷ ರೈತರಿಗೆ ವಿತರಣೆ ಮಾಡಲು ನಿರ್ಧರಿಸಲಾಗಿದೆ.

ಶೂನ್ಯ ಬಡ್ಡಿ ದರದ ಸಾಲ ಮಿತಿಯನ್ನು 3ರಿಂದ 5 ಲಕ್ಷ ರೂ.ಗೆ ಹಾಗೂ ಶೇ.3ರ ಬಡ್ಡಿ ದರದ ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲದ ಮಿತಿಯನ್ನು 10 ಲಕ್ಷ ರೂ.ನಿಂದ 15 ಲಕ್ಷ ರೂ.ಗೆ ಹೆಚ್ಚಳ ಮಾಡಲಾಗಿದೆ.

ಕೃಷಿ ಯಂತ್ರೋಪಕರಣಗಳ ಬಾಡಿಗೆಗೆ ಒದಗಿಸುವ 'ಕೃಷಿ ಯಂತ್ರಧಾರೆ', ಕೃಷಿ ಹೊಂಡಗಳನ್ನು ನಿರ್ಮಿಸುವ 'ಕೃಷಿ ಭಾಗ್ಯ ಯೋಜನೆಗೆ 100 ಕೋಟಿ ರೂ., ಜಾನುವಾರುಗಳ ಆಕಸ್ಮಿಕ ಸಾವಿಗೆ 10 ಸಾವಿರ ರೂ. ವರೆಗೆ ಪರಿಹಾರ ಒದಗಿಸುವ 'ಅನುಗ್ರಹ' ಯೋಜನೆಗಳನ್ನು ಮರುಜಾರಿ ಮಾಡುವ ಮೂಲಕ ರೈತರ ಕೈಹಿಡಿಯುವ ಕಾರ್ಯಕ್ರಮಗಳ ಜಾರಿಗೆ ಒತ್ತು ನೀಡಿದೆ.

ರೈತರು ನಿರ್ಮಿಸುವ ಗೋದಾಮಿನ ಬ್ಯಾಂಕ್ ಸಾಲಕ್ಕೆ ಶೇ.7 ಬಡ್ಡಿದರದಲ್ಲಿ ಸಹಾಯಧನ, ಶಿಥಿಲಘಟ್ಟ ರೇಷ್ಮೆಗೂಡು ಮಾರುಕಟ್ಟೆ ಮೇಲ್ದರ್ಜೆಗೆ 75 ಕೋಟಿ ರೂ. ನೆರವು, ಕೃಷಿ-ತೋಟಗಾರಿಕೆ ಉತ್ಪನ್ನಗಳ ರಫ್ತು ಉತ್ತೇಜನಕ್ಕೆ ಎಫ್‌ಪಿಒ, ನವೋದ್ಯಮಿ ಹಾಗೂ ಕಿರು ಆಹಾರ ಸಂಸ್ಕರಣಾ ಉದ್ದಿಮೆದಾರರಿಗೆ ಬೆಂಬಲ ನೀಡಲು 5 ಕೋಟಿ ರೂ. ಒದಗಿಸಲಾಗಿದೆ. ಜತೆಗೆ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ಮಾರುಕಟ್ಟೆ ಒದಗಿಸಲು 'ನವೋದ್ಯಮ' ಯೋಜನೆಯಡಿ 10 ಕೋಟಿ ರೂ. ಅನುದಾನ ನಿಗದಿ ಮಾಡಲಾಗಿದೆ.

'ನಂದಿನಿ' ಏಕೀಕೃತ ಬ್ರ್ಯಾಂಡಿಂಗ್‌ಗೆ ಒತ್ತು: ಕೃಷಿ ಉತ್ಪನ್ನಗಳನ್ನು ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು 'ನಂದಿನಿ' ಮಾದರಿಯಲ್ಲಿ ಏಕೀಕೃತ ಬ್ರ್ಯಾಂಡಿಂಗ್ ವ್ಯವಸ್ಥೆ ರೂಪಿಸಲು 10 ಕೋಟಿ ರೂ. ಒದಗಿಸಲಾಗಿದೆ. ನಂದಿನಿ ಬ್ರ್ಯಾಂಡ್ ಕನ್ನಡಿಗರೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದು, ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆಗಾಗಿ 8 ಶೀತಲ ಘಟಕಗಳನ್ನು ನಿರ್ಮಾಣ ಮಾಡಲಾಗುತ್ತದೆ. ರಾಜ್ಯದ ಕಾಫಿಯನ್ನು ಇನ್ನಷ್ಟು ಜನಪ್ರಿಯಗೊಳಿಸಲು 'ಕಾಫಿ ಎಕೋ ಟೂರಿಸಂ' ಮುನ್ನೆಲೆಗೆ ತರಲಾಗುತ್ತದೆ. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತೋಟಗಾರಿಕೆ ಕ್ಷೇತ್ರದ ಪ್ರಾಯೋಗಿಕ ಅರಿವು ಮೂಡಿಸಲು 'ವಿದ್ಯಾರ್ಥಿಗಳಿಗಾಗಿ ತೋಟಗಾರಿಕೆ' ಯೋಜನೆಯನ್ನು ಜಾರಿಗೊಳಿಸಲಾಗುತ್ತದೆ.



ಮುಖ್ಯಾಂಶ

- ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಹಾಸನ, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳಲ್ಲಿ ಕೃಷಿ ಉತ್ಪನ್ನ ಮತ್ತು ಪರಿಕರಗಳ ಸಾಗಣೆಗೆ 4 ಚಕ್ರದ ಪಿಕ್‌ಅಪ್ ವ್ಯಾನ್ ಖರೀದಿಗೆ 7 ಲಕ್ಷ ರೂ. ವರೆಗಿನ ಸಾಲಕ್ಕೆ ಶೇ.4ರ ಬಡ್ಡಿ ದರ ಅನ್ವಯ.
- ಶೀಘ್ರ ಹಾಳಾಗುವ ಹಣ್ಣು, ಹೂವು, ತರಕಾರಿ ಬೆಲೆ ಕುಸಿತದ ಸಮಸ್ಯೆ ನಿವಾರಣೆಗೆ ಆಯ್ದ 50 ತರಕಾರಿ ಮಾರುಕಟ್ಟೆಗಳಲ್ಲಿ ಮಿನಿ ಶೀತಲಗೃಹ ನಿರ್ಮಾಣ.
- ಕೃಷಿ ಯಂತ್ರಧಾರೆ ಯೋಜನೆಯಡಿ 100 ಹಬ್ ಸ್ಥಾಪನೆಗೆ 50 ಕೋಟಿ ರೂ. ಮೀಸಲು.
- ರೇಷ್ಮೆನೂಲು ಬಿಜ್ಜಾಣಿಕೆದಾರರಿಗೆ ಶೂನ್ಯ ಬಡ್ಡಿದರದಲ್ಲಿ 5 ಲಕ್ಷ ರೂ. ವರೆಗೆ ಸಾಲ ಸೌಲಭ್ಯ.
- ಚರ್ಮಗಂಟು ರೋಗದಿಂದ ಜಾನುವಾರು ಮರಣದ ಪರಿಹಾರಕ್ಕೆ 12 ಕೋಟಿ ರೂಪಾಯಿ ನಿಗದಿ.
- ಮೀನುಗಾರಿಕೆಗೆ ಬಳಕೆಯಾಗುವ ಶೈತ್ಯಾಗಾರಗಳ ದುಪ್ಪಟ್ಟಿಗೆ ಪಿಪಿಪಿ ಮಾದರಿ ಯೋಜನೆ ಜಾರಿ.

ಎಪಿಎಂಸಿ ಕಾಯ್ದೆ ರದ್ದು ಚುನಾವಣೆ ವೇಳೆ ಭರವಸೆ

ನೀಡಿದಂತೆ ಎಪಿಎಂಸಿ ಕಾಯ್ದೆಯನ್ನು ಹಿಂಪಡೆಯುವ ನಿರ್ಧಾರ ಪ್ರಕಟಿಸಲಾಗಿದೆ. ಕಾಯ್ದೆ ತಿದ್ದುಪಡಿ ಮುನ್ನ 2018-19ರಲ್ಲಿ ರಾಜ್ಯದ 167 ಕೃಷಿ ಉತ್ಪನ್ನ ಮಾರುಕಟ್ಟೆಗಳ ಒಟ್ಟು ಆದಾಯ 570 ರಿಂದ 600 ಕೋಟಿ ರೂ. ಇತ್ತು. 2022-23ರಲ್ಲಿ ಕಾಯ್ದೆ ತಿದ್ದುಪಡಿ ಬಳಿಕ 193 ಕೋಟಿ ರೂ. ಗೆ ಕುಸಿದಿದೆ. ಮುಕ್ತ ಮಾರುಕಟ್ಟೆಯಲ್ಲಿ ಖಾಸಗಿ ಸಂಸ್ಥೆಗಳು ರೈತರನ್ನು ವಂಚಿಸುತ್ತಿರುವ ಹಿನ್ನೆಲೆಯಲ್ಲಿ ಕಾಯ್ದೆ ವಾಪಸ್ ಪಡೆಯಲಾಗುವುದು ಎಂದು ಪ್ರಕಟಿಸಲಾಗಿದೆ.

ಹಮಾಲರಿಗೆ ಕಾಯಕ ನಿಧಿ



ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ)ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಮಾಲರು ಮರಣ ಹೊಂದಿದಲ್ಲಿ ಶವ ಸಂಸ್ಕಾರಕ್ಕಾಗಿ ನೀಡುವ ಮೊತ್ತವನ್ನು 10,000 ರೂ. ನಿಂದ 25,000 ರೂ.ಗೆ ಹೆಚ್ಚಳ ಮಾಡಲಾಗಿದೆ.

25,948 ಹೆಕ್ಟೇರ್ ಕ್ಷೇತ್ರ ನೀರಾವರಿ ಜಾಲಕ್ಕೆ

ಮಂದಗತಿಯಲ್ಲಿ ಸಾಗುತ್ತಿರುವ ಪ್ರಮುಖ 10 ನೀರಾವರಿ ಕಾಮಗಾರಿಗಳನ್ನು ತೀವ್ರವಾಗಿ ಪೂರ್ಣಗೊಳಿಸಲು 940 ಕೋಟಿ ರೂ. ಒದಗಿಸಲು ತೀರ್ಮಾನಿಸಲಾಗಿದ್ದು, ಈ ಯೋಜನೆಗಳ ಅನುಷ್ಠಾನದಿಂದ 25,948 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಹಿಂದೆ ಘೋಷಿಸಿರುವ ಹಾಗೂ ಕಾಮಗಾರಿ ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳಿಗೆ ಒಂದು ಲಕ್ಷ ಕೋಟಿ ರೂ. ವರೆಗೆ ಅನುದಾನ ಅಗತ್ಯವಿದ್ದು, ಈ ಮೊತ್ತವೂ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಹೊಸ ನೀರಾವರಿ ಯೋಜನೆಗಳನ್ನು ಘೋಷಿಸುವ ಬದಲಿಗೆ ಹಳೇ ಯೋಜನೆಗಳನ್ನು ಪೂರ್ಣಗೊಳಿಸುವತ್ತ ಸರ್ಕಾರ ಚಿತ್ತ ಹರಿಸಿದೆ.

ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ



ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು 172 ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಇವುಗಳಲ್ಲಿ 19 ಕೆರೆ ತುಂಬಿಸುವ ಯೋಜನೆಗಳನ್ನು 770 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಳಿಸಿ, ವಿವಿಧ ಜಿಲ್ಲೆಗಳ 899 ಕೆರೆಗಳಿಗೆ ನೀರು ಹರಿಸಲು ಉದ್ದೇಶಿಸಲಾಗಿದೆ. ಕೆರೆಗಳ ಸುತ್ತ ಜೀವಪರಿಸರ ಉಳಿಸಿಕೊಂಡು, ಪುನರುಜ್ಜೀವನಗೊಳಿಸಲು ಕೆರೆಗಳ ಬಳಕೆದಾರರ ಸಂಘಗಳನ್ನು ಬಲಿಷ್ಠಗೊಳಿಸಿ ಅಭಿವೃದ್ಧಿಗೆ ಪಾಲುದಾರರನ್ನಾಗಿ ಮಾಡಿ ಜಲಬಳಕೆ ಮಾಡಲು ಕ್ರಿಯಾಯೋಜನೆ ಸಿದ್ಧಪಡಿಸಲು ಯೋಜಿಸಲಾಗಿದೆ.

- ಕುಲಹಳ್ಳಿ-ಹನ್ಯಾರು, ತಿಮ್ಮಾಪುರ, ಸಸಾಲಟ್ಟಿ-ಶಿವಲಿಂಗೇಶ್ವರ ಮತ್ತು ಮಂಟೂರು ಮಹಾಲಕ್ಷ್ಮಿ ಏತ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿ ಸುಮಾರು 39,134 ಹೆಕ್ಟೇರ್ ಅಚ್ಚುಕಟ್ಟು ಸ್ಥಿರೀಕರಣಕ್ಕೆ ಯೋಜನೆ.
- ಎತ್ತಿನಹೊಳೆ ಯೋಜನೆ ಕಾಮಗಾರಿ ಯೋಜನಾ ವೆಚ್ಚ 23,252 ಕೋಟಿ ರೂ.ಗೆ ಏರಿಕೆ.
- ಮೇಕೆದಾಟು ಸಮತೋಲನ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆಯ ವಿವರವಾದ ಕೇಂದ್ರದಿಂದ ತೀರುವಳಿ ಪಡೆಯಲು ಅಗತ್ಯ ಕ್ರಮ. ಭೂಸ್ವಾಧೀನ ಪ್ರಕ್ರಿಯೆಗೆ ಅದ್ಯತೆ ಮೇರೆಗೆ ಕ್ರಮ.
- ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ ಘೋಷಿಸಿರುವ 5,300 ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡುವಂತೆ ಒತ್ತಡ ಹೇರಿ ಯೋಜನೆಯ ಅನುಷ್ಠಾನಕ್ಕೆ ಆದ್ಯತೆಯ ಮೇಲೆ ಕ್ರಮ
- ಮಹದಾಯಿ ನ್ಯಾಯಾಧಿಕರಣದಿಂದ ಕಳಸಾ ಮತ್ತು ಬಂಡೂರಾ ನಾಲಾ ತಿರುವು ಕುಡಿಯುವ ನೀರಿನ ಯೋಜನೆಗೆ ಹಂಚಿಕೆಯಾದ 3.90 ಟಿ.ಎಂ.ಸಿ. ನೀರಿನ ಬಳಕೆಗಾಗಿ ಈಗಾಗಲೇ ಕೇಂದ್ರ ಜಲ ಆಯೋಗದ ತೀರುವಳಿ ದೊರಕಿದ್ದು, ಅವಶ್ಯಕವಿರುವ ಅರಣ್ಯ ತೀರುವಳಿ ಪಡೆದು, ಕಾಮಗಾರಿಗಳಿಗೆ ಚಾಲನೆ ನೀಡಲು ಪ್ರಯತ್ನ.
- ಕೆ.ಸಿ. ವ್ಯಾಲಿ ಮತ್ತು ಎಚ್.ಎನ್. ವ್ಯಾಲಿ ಯೋಜನೆಗಳಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಯೋಜನೆಯ ಮೂಲಕ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಕೆರೆಗಳಿಗೆ ನೀರು ತುಂಬಿಸಲು 529 ಕೋಟಿ ರೂ. ವೆಚ್ಚದಲ್ಲಿ 2ನೇ ಹಂತದ ಯೋಜನೆ ಅನುಷ್ಠಾನ.



• ಡಾ.ಎಸ್.ವಿ.ಸುರೇಶ
ಬೆಂಗಳೂರು ಕೃಷಿ ವಿವಿ ಕುಲಪತಿ

ಕೃಷಿಗೆ ಉತ್ತಮ ಕೊಡುಗೆ

ಕೃಷಿ ಮತ್ತು ಪೂರಕ ಚಟುವಟಿಕೆಗಳಿಗೆ ₹8884 ಕೋಟಿ ಮೀಸಲಿಟ್ಟಿರುವುದು ಸ್ವಾಗತಾರ್ಹ. ₹100 ಕೋಟಿ ವೆಚ್ಚದಲ್ಲಿ ಕೃಷಿ ಭಾಗ್ಯ ಯೋಜನೆ ಮರು ಜಾರಿ ಮಾಡುವುದಾಗಿ ಹೇಳಿರುವುದು ಅಭಿನಂದನೀಯ. ಕೃಷಿ ಸಂಶೋಧನೆಗೆ ಉತ್ತೇಜನ, ಯಾಂತ್ರೀಕರಣಕ್ಕೆ ಒತ್ತು, ಕರ್ನಾಟಕ ರಾಜ್ಯ ಸಂಶೋಧನಾ ಪ್ರತಿಷ್ಠಾನ ರಚನೆಗೆ ಕ್ರಮ ಪ್ರಶಂಸನೀಯ. ಒಟ್ಟಾರೆ ಹೇಳುವುದಾದರೆ ಕೃಷಿ ಉತ್ಪಾದನೆ, ಉತ್ಪಾದಕತೆ ಹೆಚ್ಚಿಸುವಲ್ಲಿ ಬಜೆಟ್ ನೆರವಾಗಲಿದ್ದು, ಕೃಷಿಕರ ಆದಾಯ ವೃದ್ಧಿಗೆ ಪೂರಕವಾಗಿದೆ. ರೈತರ ಸಾಲ ಮಿತಿ ಹೆಚ್ಚಿಸಿರುವುದರಿಂದ ನೆರವಾಗಲಿದೆ.



"ನವೋದ್ಯಮ ಹೊಸ ಯೋಜನೆಯಡಿ ಕೃಷಿ ಉದ್ಯಮಗಳಿಗೆ ನಾವೀನ್ಯತೆ ಪ್ರೋತ್ಸಾಹಿಸಲು 10 ಕೋಟಿ ನೆರವು, ರೈತ ಉತ್ಪಾದಕ ಸಂಸ್ಥೆಗಳ ಕೃಷಿ ಉತ್ಪನ್ನಗಳ ಏಕೀಕೃತ ಬ್ರ್ಯಾಂಡಿಂಗ್‌ಗಾಗಿ 10 ಕೋಟಿ ಮೀಸಲು ನೀಡಿರುವುದು ಉತ್ತಮ ಬೆಳವಣಿಗೆ.

• ಡಾ.ಎಸ್.ವಿ.ಸುರೇಶ್, ಕುಲಪತಿ, ಕೃಷಿ ವಿವಿ"

08-07-2023
Udayavani Pg 10

08-07-2023
Kannadaprabha Pg 10

For more information visit
University Library Website
Web - uasbagrilibindia.org
E-mail- librarian@uasbangalore.edu.in

08-07-2023
Kannadaprabha Pg 06

ಮಳೆಯಾಶ್ರಿತ ಪ್ರದೇಶದಲ್ಲಿ ನೀರು ಸಂರಕ್ಷಣೆಗೆ

ಕೃಷಿಭಾಗ್ಯ ಮರುಜಾರಿ



ಕೃಷಿ ಹೊಂಡ ನಿರ್ಮಿಸಲು ಮತ್ತೆ ಸರ್ಕಾರದಿಂದ ಸಬ್ಸಿಡಿ | ಕೃಷಿ–ತೋಟಗಾರಿಕೆಗೆ 5,860 ಕೋಟಿ ರು.ಮೀಸಲು
ಕೃಷಿ ಭಾಗ್ಯ ಯೋಜನೆಗೆ 100 ಕೋಟಿ ರು. ಅನುದಾನ | ಕೃಷಿ ನವೋದ್ಯಮಕ್ಕೆ ಉತ್ತೇಜಿಸಲು 10 ಕೋಟಿ ರು.

ಈ ಬಾರಿಯ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೈತರಿಗೆ ಭರಪೂರ ಕೊಡುಗೆ ನೀಡಿದ್ದಾರೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಆಯವ್ಯಯದಲ್ಲಿ 5,860 ಕೋಟಿ ರು. ಮೀಸಲು ಇಟ್ಟಿದ್ದಾರೆ. ಜೊತೆಗೆ ಮಳೆಯಾಶ್ರಿತ ಕೃಷಿ ಪ್ರದೇಶಗಳಲ್ಲಿ ಕೃಷಿ ಹೊಂಡ ನಿರ್ಮಿಸಿ, ಪ್ರತಿ ಹನಿ ನೀರಿಗೆ ಹೆಚ್ಚಿನ ಬೆಳೆ ಬೆಳೆಯುವ ಮಹತ್ವಾಕಾಂಕ್ಷಿ ಯೋಜನೆಯಾದ ಕೃಷಿಭಾಗ್ಯಕ್ಕೆ ಮರುಜೀವ ನೀಡಿದ್ದಾರೆ.

ಕೃಷಿ ಭಾಗ್ಯ ಯೋಜನೆಯಡಿ ರೈತರು ಮಳೆ ನೀರನ್ನು ಸಂರಕ್ಷಿಸಿ ಕೊರತೆಯ ಸಮಯದಲ್ಲಿ ಕೃಷಿ ಹೊಂಡದ ನೀರನ್ನು ಬಳಕೆ ಮಾಡಿಕೊಳ್ಳಲು ಅನುಕೂಲವಾಗುವಂತೆ ಲಿಫ್ಟ್ ಪಂಪ್‌ಗಳು, ಡೀಸೆಲ್ ಮೋಟಾರ್‌ಗಳು, ಟಾರ್ಪಲ್‌ಗಳನ್ನು ಖರೀದಿಸಲು ಅನುದಾನ ಪಡೆಯಬಹುದಾಗಿದೆ. ಈ ಯೋಜನೆಯನ್ನು ಉದ್ಯೋಗ ಖಾತ್ರಿ ಯೋಜನೆಯೊಂದಿಗೆ ಸಂಯೋಜಿಸಿ 100 ಕೋಟಿ ರು. ಒದಗಿಸಲಾಗಿದೆ.

ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ವಲಯಗಳನ್ನು ಪ್ರೋತ್ಸಾಹಿಸಲು ನವೋದ್ಯಮ ಎಂಬ ಹೊಸ ಯೋಜನೆಗೆ 10 ಕೋಟಿ ರು. ಅನುದಾನ ಒದಗಿಸಲಾಗಿದೆ. ನಂದಿನಿ ಮಾದರಿಯಲ್ಲಿ ರೈತರ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆ ಒದಗಿಸಲು ಏಕೀಕೃತ ಬ್ರಾಂಡಿಂಗ್ ವ್ಯವಸ್ಥೆ ರೂಪಿಸಲು 10 ಕೋಟಿ ರು. ಮೀಸಲು ಇಡಲಾಗಿದೆ. ಜೊತೆಗೆ ವಾಣಿಜ್ಯ ಬ್ಯಾಂಕುಗಳು ರೈತ ಉತ್ಪಾದಕ ಸಂಸ್ಥೆಗಳಿಗೆ ನೀಡುವ 20 ಲಕ್ಷ ರು.ವರೆಗಿನ ಸಾಲಕ್ಕೆ ಶೇ.4ರ ಬಡ್ಡಿ ಸಹಾಯಧನ ನೀಡುವುದಾಗಿ ಭರವಸೆ ನೀಡಿದ್ದಾರೆ.

ಗೋದಾಮು, ಶೀತಲಗೃಹ ನಿರ್ಮಾಣ ಮತ್ತು ಇತರ ಮೂಲಸೌಕರ್ಯ ಸೃಜನೆಗೆ ಯೋಜನಾ ವೆಚ್ಚದ ಗರಿಷ್ಠ ಶೇ.20ರಷ್ಟು, ಒಂದು ಕೋಟಿ ರು. ಮೀರದಂತೆ ಸೀಡ್ ಕ್ಯಾಪಿಟಲ್ ಒದಗಿಸಲು ನಿರ್ಧರಿಸಲಾಗಿದೆ. ರೈತ ಉತ್ಪಾದಕ ಸಂಸ್ಥೆಗಳು, ನವೋದ್ಯಮಿಗಳು ಮತ್ತು ಕಿರು ಆಹಾರ ಸಂಸ್ಕರಣಾ ಉದ್ದಿಮೆದಾರರಿಗೆ ಬೆಂಬಲ ನೀಡಲು 5 ಕೋಟಿ ರು. ಒದಗಿಸಲಾಗಿದೆ. ಕೃಷಿ ಯಂತ್ರಧಾರೆ ಕೇಂದ್ರ ಬಲಪಡಿಸಲು 2023–24ನೇ ಸಾಲಿನಲ್ಲಿ 100 ಹೈಟೆಕ್ ಹಾರ್ವೆಸ್ಟರ್ ಹಬ್ ಸ್ಥಾಪಿಸಲು 50 ಕೋಟಿ ರು. ಅನುದಾನ ಮೀಸಲಿಡಲಾಗಿದೆ.

ತೋಟಗಾರಿಕೆ ಇಲಾಖೆಗೆ ಸಿಕ್ಕಿದ್ದೇನು: ತೆಂಗು, ಅಡಿಕೆ, ದ್ರಾಕ್ಷಿ, ದಾಳಿಂಬೆ, ಮಾವು ಮತ್ತಿತರ ಹಣ್ಣುಗಳು, ತರಕಾರಿ, ಹೂವುಗಳ ಉತ್ಪಾದನೆ, ಸಂಸ್ಕರಣೆ, ಬ್ರಾಂಡಿಂಗ್ ಮತ್ತು ರಫ್ತಿಗೆ ಹೆಚ್ಚಿನ ಒತ್ತು ನೀಡಲು ನಿರ್ಧರಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ತೋಟಗಾರಿಕೆ ಬೆಳೆಗಳ ರೋಗ ನಿಯಂತ್ರಣಕ್ಕೆ 5 ಕೋಟಿ ರು. ಮೀಸಲು ಇಡಲಾಗಿದೆ. ತೋಟಗಾರಿಕಾ ಉತ್ಪನ್ನಗಳ ಸಂಸ್ಕರಣೆಗಾಗಿ ಎಂಟು ಶೀತಲ ಘಟಕಗಳನ್ನು ನಿರ್ಮಾಣ ಮಾಡಲು ನಿರ್ಧರಿಸಲಾಗಿದೆ.

ರಾಜ್ಯದ ಕಾಫಿ ಜನಪ್ರಿಯಗೊಳಿಸಲು ಮತ್ತು ಕಾಫಿ ಎಕೋ ಟೂರಿಸಂ ಉತ್ತೇಜಿಸಲು ಕರ್ನಾಟಕದ ಕಾಫಿಗೆ ಬ್ರಾಂಡಿಂಗ್ ಮತ್ತು ಮೈಸೂರು ಮಲ್ಲಿಗೆ, ನಂಜನಗೂಡು ರಸಬಾಳೆ, ಮೈಸೂರು ವೀಳ್ಯದೆಲೆಯ ಉತ್ಪಾದನೆ, ಸಂಶೋಧನೆ, ಮಾರುಕಟ್ಟೆ ಮತ್ತು ಬ್ರಾಂಡಿಂಗ್ ಉತ್ತೇಜಿಸಲು ನೂತನ ಕಾರ್ಯಕ್ರಮ ರೂಪಿಸಲಾಗುತ್ತಿದೆ. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತೋಟಗಾರಿಕಾ ಕ್ಷೇತ್ರದ ಪ್ರಾಯೋಗಿಕ ಅರಿವು ಮೂಡಿಸಲು 'ವಿದ್ಯಾರ್ಥಿಗಳಿಗಾಗಿ ತೋಟಗಾರಿಕೆ' ಯೋಜನೆ ಜಾರಿಗೊಳಿಸುವುದಾಗಿ ತಿಳಿಸಲಾಗಿದೆ.

ಕೃಷಿಭಾಗ್ಯ ಜಾರಿ ಉತ್ತಮ ನಿರ್ಧಾರ



ಕೃಷಿಭಾಗ್ಯ ಯೋಜನೆ ಮತ್ತೆ ಜಾರಿಗೆ ತಂದಿರುವುದು ಸ್ವಾಗತಾರ್ಹ. ರೈತರ ಉತ್ಪನ್ನಗಳಿಗೆ ಏಕೀಕೃತ ಬ್ರಾಂಡಿಂಗ್ ವ್ಯವಸ್ಥೆ ರೂಪಿಸಿ ಮಾರುಕಟ್ಟೆ ಒದಗಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವ ಅಗತ್ಯವಿದೆ. ಹೆಚ್ಚಿನ ಸಂಖ್ಯೆಯಲ್ಲಿ ಶೀತಲೀಕರಣ ಗೃಹ ನಿರ್ಮಾಣ ಮತ್ತು ಮೂಲಸೌಕರ್ಯ ಒದಗಿಸುವುದಕ್ಕೆ ರಾಜ್ಯ ಸರ್ಕಾರ ಇನ್ನೂ ಹೆಚ್ಚಿನ ಆದ್ಯತೆ ನೀಡಬೇಕಿದೆ.

- **ಕುರುಬೂರು ಶಾಂತಕುಮಾರ್**
  ರಾಜ್ಯಾಧ್ಯಕ್ಷ, ರೈತ ಸಂಘಟನೆಗಳ ಒಕ್ಕೂಟ



ಶಿಡ್ಲಘಟ್ಟದಲ್ಲಿ ರೇಷ್ಮೆ ಮಾರುಕಟ್ಟೆ ಅಭಿವೃದ್ಧಿ

ಪ್ರೋತ್ಸಾಹ ಧನ ಹೆಚ್ಚಿಸಲಿ



ಶಿಡ್ಲಘಟ್ಟದಲ್ಲಿ ₹75 ಕೋಟಿ ವೆಚ್ಚದಲ್ಲಿ ಮಾರುಕಟ್ಟೆ ಅಭಿವೃದ್ಧಿಪಡಿಸುವ ರಾಜ್ಯ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ರೇಷ್ಮೆಗೆ ಪ್ರೋತ್ಸಾಹ ಧನ ಇನ್ನೂ ಹೆಚ್ಚು ಮಾಡಬೇಕು. ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲಸೌಲಭ್ಯ ಕೊಡುವ ಕಾರ್ಯಕ್ರಮ ಮೆಚ್ಚುವಂತದ್ದು.

- **ರವಿ, ಪ್ರಧಾನ ಕಾರ್ಯದರ್ಶಿ** ರೇಷ್ಮೆ ಬೆಳೆಗಾರರ ಹಿತರಕ್ಷಣಾ ವೇದಿಕೆ, ರಾಮನಗರ

ರಾಜ್ಯದಲ್ಲಿ ರೇಷ್ಮೆ ಉದ್ಯಮದ ಅಭಿವೃದ್ಧಿಗೆ ಆದ್ಯತೆ ಕೊಡಬೇಕು. ರೇಷ್ಮೆ ಬೆಳೆಗಾರರು ಮತ್ತು ನೂಲು ಬಿಚ್ಚಾಣಿಕೆದಾರರು ರೇಷ್ಮೆ ಉದ್ಯಮದ ಎರಡು ಕಣ್ಣುಗಳಾಗಿದ್ದು, ಅವರ ಅಭಿವೃದ್ಧಿಗೆ ಕ್ರಮಕೈಗೊಳ್ಳಬೇಕೆಂಬ ರೇಷ್ಮೆ ಬೆಳೆಗಾರರ ಒಕ್ಕೊರಲಿನ ಕೂಗಿಗೆ ರಾಜ್ಯ ಸರ್ಕಾರ ಕಿವಿಗೊಟ್ಟಿದೆ. ಬಜೆಟ್‌ನಲ್ಲಿ ರೇಷ್ಮೆ ಉದ್ಯಮ ಮತ್ತು ನೂಲು ಬಿಚ್ಚಾಣಿಕೆದಾರರ ಅಭಿವೃದ್ಧಿಗೆ ಬಂಪರ್ ಕೊಡುಗೆ ನೀಡಿದೆ. ಈಗಾಗಲೇ ರಾಮನಗರ ಜಿಲ್ಲೆಯಲ್ಲಿ ₹75 ಕೋಟಿ ವೆಚ್ಚದಲ್ಲಿ ಅತಿದೊಡ್ಡ ಹೈಟೆಕ್ ಮಾರುಕಟ್ಟೆ ನಿರ್ಮಾಣವಾಗುತ್ತಿದೆ. ಕೋಲಾರ, ಚಿಕ್ಕಬಳ್ಳಾಪುರ ಮತ್ತು ಸುತ್ತಮುತ್ತಲಿನ ರೈತರಿಗೆ ಅನುಕೂಲವಾಗುವಂತೆ ಶಿಡ್ಲಘಟ್ಟದ ಮಾರುಕಟ್ಟೆಯನ್ನು ₹75 ಕೋಟಿವೆಚ್ಚದಲ್ಲಿಹೈಟೆಕ್‌ರೇಷ್ಮೆಗೂಡುಮಾರುಕಟ್ಟೆಯಾಗಿಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ.

ಮೈಸೂರು ರೇಷ್ಮೆಬಿತ್ತನೆಪ್ರದೇಶದಲ್ಲಿಮೂಲಸೌಕರ್ಯ ಒದಗಿಸಿಗುಣಮಟ್ಟದ ರೋಗರಹಿತವಾದ ಮೈಸೂರು ಬಿತ್ತನೆ ಗೂಡುಗಳನ್ನು ಉತ್ಪಾದಿಸಲು ಉದ್ದೇಶಿಸಲಾಗಿದೆ. ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಅನುಕೂಲವಾಗುವಂತೆ ರೇಷ್ಮೆಗೂಡಿನ ಖರೀದಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ₹5ಲಕ್ಷ ವರೆಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸುವುದಾಗಿ ತಿಳಿಸಲಾಗಿದೆ.

ಎಪಿಎಂಸಿ ಕಾಯ್ದೆ ತಿದ್ದುಪಡಿ ರದ್ದು

5 ಲಕ್ಷ ರೈತರ ಶೂನ್ಯ ಬಡ್ಡಿದರದ ಅಲ್ಪಾವಧಿ ಸಾಲ ಮಿತಿ 3ರಿಂದ ₹5ಲಕ್ಷಕ್ಕೇರಿಕೆ

15 ಲಕ್ಷ ಶೇ.3 ಬಡ್ಡಿದರದ ದೀರ್ಘಾವಧಿ, ಮಧ್ಯಮ ಸಾಲ ₹15 ಲಕ್ಷಕ್ಕೇರಿಕೆ

ವಿವಾದಕ್ಕೆ ಗ್ರಾಸವಾಗಿದ್ದ ಎಪಿಎಂಸಿ ಕಾಯ್ದೆಗೆ ತಂದಿದ್ದ ತಿದ್ದುಪಡಿ ರದ್ದು ಮಾಡುವುದಾಗಿ ಘೋಷಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರೈತರನ್ನು ಆರ್ಥಿಕವಾಗಿ ಸಬಲಗೊಳಿಸಲು ಕೃಷಿ ಚಟುವಟಿಕೆಗಳಿಗೆ ಸಹಕಾರ ವಲಯದಿಂದ ಸಿಗುತ್ತಿದ್ದ ಸಾಲದ ಮಿತಿಯನ್ನು ಗಣನೀಯವಾಗಿ ಹೆಚ್ಚಿಸಿದ್ದಾರೆ. ಈ ಮೂಲಕ ಅನ್ನದಾತರಿಗೆ ಆರ್ಥಿಕ ಶಕ್ತಿ ತುಂಬುವ ಕಾರ್ಯಕ್ಕೆ ಮುಂದಾಗಿದ್ದಾರೆ.

ಎಪಿಎಂಸಿ ಕಾಯ್ದೆಗೆ ಹಿಂದಿನ ಬಿಜೆಪಿ ಸರ್ಕಾರ ತಿದ್ದುಪಡಿ ತಂದಿದ್ದಕ್ಕೆ ಅನ್ನದಾತರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಅಂದು ಪ್ರತಿಪಕ್ಷದಲ್ಲಿದ್ದ ಕಾಂಗ್ರೆಸ್ ಸಹ ಇದನ್ನು ವಿರೋಧಿಸಿತ್ತು. ಅಧಿಕಾರಕ್ಕೆ ಬಂದರೆ ತಿದ್ದುಪಡಿ ರದ್ದು ಮಾಡುವುದಾಗಿಯೂ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಭರವಸೆ ನೀಡಿತ್ತು. ಅದರಂತೆ ಎಪಿಎಂಸಿ ಕಾಯ್ದೆಗೆ ತಂದಿದ್ದ ತಿದ್ದುಪಡಿ ರದ್ದುಪಡಿಸುವುದಾಗಿ ಸಿದ್ದರಾಮಯ್ಯ ಬಜೆಟ್‌ನಲ್ಲಿ ಪ್ರಕಟಿಸಿದ್ದಾರೆ.

2018–19ರಲ್ಲಿ ರಾಜ್ಯದ 167 ಕೃಷಿ ಉತ್ಪನ್ನ ಮಾರುಕಟ್ಟೆಗಳ ಒಟ್ಟು ಆದಾಯ ₹570 ರಿಂದ ₹600 ಕೋಟಿ ಇತ್ತು. 2022–23ರಲ್ಲಿ ಕಾಯ್ದೆ ತಿದ್ದುಪಡಿ ನಂತರ ಕೇವಲ ₹193 ಕೋಟಿಗೆ ಕುಸಿದಿದೆ. ಅಲ್ಲದೆ, ಮುಕ್ತ ಮಾರುಕಟ್ಟೆಯಲ್ಲಿ ಖಾಸಗಿ ಸಂಸ್ಥೆಗಳು ರೈತರನ್ನು ವಂಚಿಸಿದ ನಿದರ್ಶನಗಳಿವೆ. ಈ ಅವ್ಯವಸ್ಥೆ ಸರಿಪಡಿಸಿ ರೈತರ ಹಿತರಕ್ಷಣೆಗೆ ಈ ರೈತ ವಿರೋಧಿ ಕಾಯ್ದೆ ರದ್ದುಪಡಿಸಲಾಗುವುದು ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ರೈತರಿಗೆ ಆಶಾದಾಯಕ ಬಜೆಟ್



ರೈತರ ಪಾಲಿಗೆ ಹೊಸ ಭರವಸೆಯ ಈ ಬಜೆಟ್ ಆಶಾದಾಯಕವಾಗಿದೆ. ಶೂನ್ಯ ಬಡ್ಡಿದರದಲ್ಲಿ ನೀಡುತ್ತಿದ್ದ ಅಲ್ಪಾವಧಿ ಸಾಲ ₹5 ಲಕ್ಷಕ್ಕೆ ಹೆಚ್ಚಳ, ಶೇ.3ರ ಬಡ್ಡಿದರದಲ್ಲಿ ನೀಡುತ್ತಿದ್ದ ಮಧ್ಯಮಾವಧಿ ದೀರ್ಘಾವಧಿ ಸಾಲ ಮಿತಿ ₹15 ಲಕ್ಷಕ್ಕೆ ಹೆಚ್ಚಳ ಸಂತೋಷದ ವಿಚಾರ. ಆದರೆ ಹೆಚ್ಚುವರಿ ಸಾಲ ಒದಗಿಸುವ ನಿಧಿ ಪೂರೈಸಲು ಜಿಲ್ಲಾ ಸಹಕಾರಿ ಬ್ಯಾಂಕ್‌ಗಳಿಗೆ ಪ್ರಸ್ತುತ ನಿಗದಿಪಡಿಸಿರುವ ದರಕ್ಕೆ ಹೆಚ್ಚುವರಿಯಾಗಿ ಶೇ.2ರಷ್ಟು ಬಡ್ಡಿ ಸಬ್ಸಿಡಿಯನ್ನು ರಾಜ್ಯ ಸರ್ಕಾರವೇ ಭರಿಸಬೇಕು.

- **ಎಂ.ಎನ್.ರಾಜೇಂದ್ರಕುಮಾರ್** ಅಧ್ಯಕ್ಷರು, ರಾಜ್ಯ ಸಹಕಾರಿ ಮಾರಾಟ ಮಹಾ ಮಂಡಳ

ರೈತರಿಗೆ ಸಾಲ ಮಿತಿ ಹೆಚ್ಚಳ

ರೈತರಿಗೆ ಶೂನ್ಯ ಬಡ್ಡಿದರದಲ್ಲಿ ನೀಡುತ್ತಿದ್ದ ಅಲ್ಪಾವಧಿ ಸಾಲದ ಮಿತಿಯನ್ನು ₹3 ಲಕ್ಷದಿಂದ ₹5 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಶೇ.3ರ ಬಡ್ಡಿದರದಲ್ಲಿ ನೀಡುತ್ತಿದ್ದ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಮಿತಿಯನ್ನು ₹10 ಲಕ್ಷದಿಂದ ₹15 ಲಕ್ಷಕ್ಕೆ ಹೆಚ್ಚಳ ಮಾಡಿದ್ದು, ಪ್ರಸಕ್ತ ಸಾಲಿನಲ್ಲಿ 35 ಲಕ್ಷಕ್ಕಿಂತ ಹೆಚ್ಚಿನ ರೈತರಿಗೆ ₹25 ಸಾವಿರ ಕೋಟಿ ಸಾಲ ವಿತರಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಕೃಷಿ ಉತ್ಪನ್ನಗಳನ್ನು ಸಂಗ್ರಹಿಸಲು ರೈತರು ಗೋದಾಮು ನಿರ್ಮಿಸಲು ಬ್ಯಾಂಕ್‌ಗಳಿಂದ ಪಡೆಯುವ ₹20 ಲಕ್ಷ ವರೆಗಿನ ಸಾಲಕ್ಕೆ ರಾಜ್ಯ ಸರ್ಕಾರ ಶೇ.7ರಷ್ಟು ಬಡ್ಡಿ ಸಹಾಯಧನ ನೀಡಲಿದೆ. ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಹಾಸನ, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳ ರೈತರ ಕೃಷಿ ಉತ್ಪನ್ನ ಮತ್ತು ಪರಿಕರಗಳ ಸಾಗಣೆಗೆ 4 ಚಕ್ರದ ಪಿಕ್‌ಅಪ್ ವ್ಯಾನ್ ಖರೀದಿಸಲು ₹7 ಲಕ್ಷ ವರೆಗಿನ ಸಾಲವನ್ನು ಶೇ.4ರ ಬಡ್ಡಿದರದಲ್ಲಿ ವಿತರಿಸಲಿದೆ. 50 ತರಕಾರಿ ಮಾರುಕಟ್ಟೆಗಳಲ್ಲಿ ಕೆಪೆಕ್ ಸಹಯೋಗದೊಂದಿಗೆ ಮಿನಿ ಶೀತಲ ಗೃಹ ಸ್ಥಾಪನೆ. ಎಪಿಎಂಸಿಗಳಲ್ಲಿನ ಹಮಾಲರು ಮರಣ ಹೊಂದಿದಲ್ಲಿ ಅವರ ಶವಸಂಸ್ಕಾರಕ್ಕಾಗಿ ನೀಡುವ ಮೊತ್ತ ₹10 ಸಾವಿರದಿಂದ ₹25 ಸಾವಿರಕ್ಕೆ ಹೆಚ್ಚಳ.

Krishi Bhagya climate resilient scheme to be reintroduced



Krishi Bhagya scheme will be revived in convergence with the Mahatma Gandhi National Rural Employment Guarantee Scheme with an outlay of ₹100 crore. FILE PHOTO

B.S. Satish Kumar
BENGALURU

Amidst fear of drought looming large over Karnataka, the State Budget 2023-24 presented by Chief Minister Siddaramaiah has proposed to reintroduce the erstwhile Congress government's flagship scheme of Krishi Bhagya that seeks to turn dry-land farming into climate resilient through rainwater conservation measures.

The Budget says that the Krishi Bhagya scheme, that had been discontinued by the erstwhile BJP dispensation, would be reintroduced in convergence with the Mahatma Gandhi National Rural Employment Guarantee Scheme with an outlay of ₹100 crore.

However, there are concerns among experts as the allocation for agriculture and horticulture sectors has come down by 1% of the State Budget size. As against the allocation of ₹9,456 crore during the earlier Budget presented by the then Chief Minister Basavaraj Bommai in February that was 3% of the total Budget size, the present Budget has allocated only ₹5,860 crore for this sector which accounts for 2% of Budget size. This is expected to hit various ongoing schemes.

08-07-2023
Prajavani Pg 3B

ಸಸ್ಯ ಸಂತೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆ, ಬೆಂಗಳೂರು ಪ್ರಾದೇಶಿಕ ತೋಟಗಾರಿಕಾ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಹಾಗೂ ತೋಟಗಾರಿಕಾ ಮಹಾವಿದ್ಯಾಲಯದ ಆಶ್ರಯದಲ್ಲಿ ಆಯೋಜಿಸಿದ್ದ ಪರಿಸರ ದಿನಾಚರಣೆ ಹಾಗೂ ಸಸ್ಯ ಸಂತೆಗೆ ಚಿತ್ರನಟಿ ಅಕ್ಷತಾ ಪಾಂಡವಪುರ ಚಾಲನೆ ನೀಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ವಾರದ ಸಂತೆಗಳು ಕಾಣುತ್ತಿದ್ದವು. ಇಲ್ಲಿ ಸಸ್ಯಸಂತೆ ಆಯೋಜಿಸಿರುವುದು ಉತ್ತಮ ಬೆಳವಣಿಗೆ. ಸ್ಥಳೀಯ ರೈತರು ಹಾಗೂ ನಾಗರಿಕರಿಗೆ ಉಪಯೋಗವಾಗಲಿದೆ ಎಂದು ಅಕ್ಷತಾ ತಿಳಿಸಿದರು.

ವಿಸ್ತರಣಾ ನಿರ್ದೇಶಕ ಎಸ್.ಎಲ್. ಜಗದೀಶ್, ತೋಟಗಾರಿಕಾ ಇಲಾಖೆಯ ನಿವೃತ್ತ ಹೆಚ್ಚುವರಿ ನಿರ್ದೇಶಕ ಎಸ್.ವಿ. ಹಿತ್ತಲಮನಿ ಮಾತನಾಡಿದರು. ಬನ್ನೇರು ಘಟ್ಟ ಜೈವಿಕ ಉದ್ಯಾನದ ಮೃಗಾಲಯ ಆಸ್ಪತ್ರೆಯ ಸಹಾಯಕಿ ಸಾವಿತ್ರಮ್ಮ ಅವರನ್ನು ಸನ್ಮಾನಿಸಲಾಯಿತು.

08-07-2023
Hindu Pg 04



ಜಿಕೆವಿಕೆ ಆವರಣದಲ್ಲಿರುವ ತೋಟಗಾರಿಕೆ ವಿಜ್ಞಾನಗಳ ವಿ.ವಿಯಲ್ಲಿ ಆಯೋಜಿಸಿದ್ದ ಮೂರು ದಿನಗಳ ಸಸ್ಯಸಂತೆಯನ್ನು ನಟಿ ಅಕ್ಷತಾ ಪಾಂಡವಪುರ ವೀಕ್ಷಿಸಿದರು

Exemption for agri land conversion for industries

TEAM TOI

Seeking to reach out to the farming community, Siddaramaiah proposed to increase the cap on medium and long-term farm loans from Rs 10 lakh to Rs 15 lakh (at 3% interest) and exempted land-use conversion on up to two acres of agricultural land if it is for the purpose of establishing new industries.

He also decided to continue with the proposal of the previous government to increase the limit of the interest-free loan from Rs 3 lakh to Rs 5 lakh.

He said his government intends to disburse Rs 25,000 crore in loans to more than 35 lakh farmers this fiscal year. However, rather than increasing the loan limit, most farmers want more from the farming community to be eligible for these loans. They say 50% of farmers are not covered under loan schemes of either the Union or state government.

The CM also proposed interest subsidy of up to 7% on bank loans up to Rs 20 lakh for the construction of godowns to store produce. This aside, farmers in hilly regions will get a loan up to Rs 7 lakh at 4% interest to purchase vehicles to transport farm produce and equipment. "The scheme will help farmers in Shivamogga, Chikkamagaluru, Kodagu, Hassan, Dakshina Kannada, Udupi, and Uttara Kannada districts," the CM said.

He also proposed amending the Karnataka Land Revenue Act to allow people to convert agricultural land for non-agricultural purposes by way of self-declaration.

Siddaramaiah also proposed to relaunch his pet programme, Krishi Bhagya, under which farmers are given financial assistance to dig agriculture ponds in their fields to store water. He also announced the relaunch of the Anugraha scheme, which seeks to provide financial assistance of Rs 5,000 for sheep and goats and Rs 10,000 for cows, buffalo, and bulls that die in natural calamities.

Total allocation
₹28,891cr
(includes allocation for agriculture, horticulture, fisheries, cooperation and irrigation departments)

Other proposals
- Navodyama scheme for value addition of agricultural produce and to encourage innovation in agricultural marketing
- Financial assistance to farmer-producer organisations (FROs) in the form of a 4% interest subsidy on loans up to Rs 20 lakh each availed from banks and cooperative societies
- Set up 100 high-tech harvester hubs at a cost of Rs 50 crore
- Upgrade the silk cocoon market at Shidlaghatta at a cost of Rs 75 crore



No funds for irrigation

Siddaramaiah accused the previous BJP regime of beginning work on 1,274 irrigation projects worth Rs 25,548 crore in the last six months of its regime, although the average annual budgetary allocation was only Rs 20,000 crore for the department.

"Due to this gross fiscal indiscipline of the previous government, it has become almost impossible to take up new projects," he said, adding that over Rs 1 lakh crore is required to complete the approved project as of April 1, 2023. He also blamed the Bommai government for a steep escalation in the Yettinahole project. "The cost was escalated to Rs 23,252 crore from Rs 12,912 crore," he said.

However, he proposed to complete 10 irrigation schemes to irrigate 25,948 hectares this fiscal year, besides seeking speedy approval from the centre for Mekedatu and Mahadayi drinking water projects.

08-07-2023
Hindu Pg 03

Home is where plants are

Knowing how to identify warning signs can help maintain healthy indoor plants, says **Teja Lele**

LIFESTYLE

Millennials may have sounded the death knell for many industries, including mass-market beers, paper napkins, cable TV, motorcycles/cars, and luxury goods, but they have helped one sector bloom.

A mid-pandemic survey by Article and OnePoll revealed that 70% of millennials call themselves a 'plant parent'. However, that doesn't mean that all of them are blessed with a green thumb. About half of those surveyed (48%) said they were unsure if they would be able to keep their plants alive.

Akhilesh Kadam, who runs a popular nursery in Vadodara, lists some "tolerant and forgiving" plants: monstera (Swiss Cheese plant), palms, calathea, anthuriums, string of hearts, snake plant, philodendron, jade plant, and string of pearls.

If you're looking for plants that also act as natural air purifiers, he suggests a bamboo palm, English ivy, dragon tree, Chinese evergreen, spider plant, aloe vera, rubber plant, or a weeping fig.

Kadam suggests repotting all your plants regularly (small ones once a year, large ones once in two-three years).

"When repotting, choose the right pot, going up by at least two inches in diameter to help your



plant grow larger. A drainage layer (1-3 inches) of pebbles, small stones, or broken pottery at the bottom will ensure no soil leaks out and that the roots don't sit in water," he says. Separate the roots lightly to shake off old soil, fanning them in the bottom of the pot. Place soil around and on top of the roots, and pat down.

Light works as food. The requirements differ – for example, succulents and cacti come from sunny regions and need more direct sun while ferns are typically found in cold regions and need shade.

Watch out for signs that you are over-watering (soft and mushy soil, gnats, yellow lower leaves) or under-watering (wrinkled/drooping leaves).

Edges turning black can indicate low humidity or the presence of a fungus while leaves dropping off can mean that the plant is lacking light.

Yellow leaves are a warning sign – the plant could be too dry or wet, too hot or cold. Brown leaves can indicate too much or too little water, or an overdose of fertiliser.

A mushy stem and dropping leaves most likely are signs of root rot. What when new leaves are much smaller than the older ones? "This means the plants are not getting enough light," Hussaini says. "A plant that is growing but appears dull could just need repotting and a dash of fertiliser while white cottony dots or red/black specks indicate pests and necessitate the use of an insecticide," he adds.

08-07-2023
Times of Ind Pg 1A

08-07-2023
Hindu Pg 04

ಶಿವಮೊಗ್ಗ ಮಾರುಕಟ್ಟೆಯಲ್ಲಿ ಜೂನ್‌ನಲ್ಲಿ ಗರಿಷ್ಠ ಬೆಲೆಗೆ ಮಾರಾಟ

ಮತ್ತೆ ₹80 ಸಾವಿರ ದಾಟಿದ ಸರಕು ಅಡಿಕೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಉತ್ಕೃಷ್ಟ ಗುಣಮಟ್ಟಕ್ಕೆ ಹೆಸರಾದ ಸರಕು ಅಡಿಕೆ ಇಲ್ಲಿನ ಮಾರುಕಟ್ಟೆಯಲ್ಲಿ ಶುಕ್ರವಾರ ಕ್ವಿಂಟಲ್‌ಗೆ ಗರಿಷ್ಠ ₹82,496ಕ್ಕೆ ಮಾರಾಟವಾಯಿತು. ಕನಿಷ್ಠ ₹50,599 ದರ ದೊರೆತಿದೆ.

ಜುಲೈ ತಿಂಗಳಲ್ಲಿ ಇದೇ ಮೊದಲ ಬಾರಿಗೆ ಸರಕು ಅಡಿಕೆಯ ಗರಿಷ್ಠ ಬೆಲೆಯು ₹80,000ದ ಗಡಿ ದಾಟಿತು. ಈ ಹಂಗಾಮಿನಲ್ಲಿ ಜೂನ್ 19ರಂದು ಮೊದಲ ಬಾರಿಗೆ ಸರಕು ಅಡಿಕೆಗೆ ಕ್ವಿಂಟಲ್‌ಗೆ ₹82,400 ದರ ದೊರಕಿತ್ತು.

ಜೂನ್ 21ರಂದು ಗರಿಷ್ಠ ₹86,400ಕ್ಕೆ ಮಾರಾಟವಾಗುವ ಮೂಲಕ ಈ ಬಾರಿಯ ದಾಖಲೆ



ಬರೆದಿತ್ತು. ಜೂನ್ 22ರಂದು ₹86,100, 27ರಂದು ₹83,200 ಬೆಲೆ ಪಡೆದಿದ್ದ ಸರಕು ಅಡಿಕೆ, ಕಳೆದೊಂದು ವಾರದಿಂದ ₹76,600ರ ಆಸುಪಾಸು ಇತ್ತು. ಈಗ ಮತ್ತೊಮ್ಮೆ ಹೆಚ್ಚಿನ ಬೆಲೆಗೆ ಮಾರಾಟವಾಗಿದೆ.

ರಾಶಿ ಅಡಿಕೆ ಕ್ವಿಂಟಲ್‌ಗೆ ಗರಿಷ್ಠ ₹56,299, ಕನಿಷ್ಠ ₹39,201, ಬೆಟ್ಟೆ ಅಡಿಕೆ ಗರಿಷ್ಠ ₹55,382 ಹಾಗೂ ಕನಿಷ್ಠ ₹45,000 ಹಾಗೂ ಗೊರಬಲು ಗರಿಷ್ಠ ₹42,399 ಹಾಗೂ ಕನಿಷ್ಠ ₹18,000ಕ್ಕೆ ಮಾರಾಟವಾಗಿ ದಿನದ ವಹಿವಾಟು ಮುಗಿಸಿತು. ಸಾಗರ ಮಾರುಕಟ್ಟೆಯಲ್ಲಿ ರಾಶಿ ಅಡಿಕೆಗೆ ಗರಿಷ್ಠ ₹55,599, ಕೆಂಪು ಗೋಟಿಗೆ ₹42,899 ಬೆಲೆ ದೊರಕಿತು.

'ಈಶಾನ್ಯ ರಾಜ್ಯಗಳ ಗಡಿಯಿಂದ ದೇಶದೊಳಗೆ ಅಡಿಕೆಯು ಕಳ್ಳಮಾರ್ಗದಲ್ಲಿ ಬರುವುದನ್ನು ತಡೆದರೆ ಹಾಗೂ ಅಂತರರಾಷ್ಟ್ರೀಯ ವ್ಯಾಪಾರ ಒಪ್ಪಂದಗಳ ದುರ್ಬಳಕೆ ತಪ್ಪಿದರೆ ಅಡಿಕೆಗೆ ಇನ್ನೂ ಹೆಚ್ಚು ಬೆಲೆ ದೊರೆಯಲಿದೆ' ಎಂದು ಶಿವಮೊಗ್ಗ ಜಿಲ್ಲಾ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷ ರಮೇಶ ಹೆಗ್ಡೆ ಅಡಿಕೆ ಧಾರಣೆ ಹೆಚ್ಚಳದ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಬಸವಾಪಟ್ಟಣದಲ್ಲಿ ಶುಕ್ರವಾರ ರಾಶಿ ಅಡಿಕೆ ಕ್ವಿಂಟಲ್‌ಗೆ ಗರಿಷ್ಠ ₹56,399 ಏರಿಕೆಯಾಗಿದೆ. ಇದು ಈ ವರ್ಷದ ರಾಶಿ ಅಡಿಕೆಯ ಗರಿಷ್ಠ ದರ. ಏಪ್ರಿಲ್‌ನಲ್ಲಿ ₹48,000 ಇದ್ದ ರಾಶಿ ಅಡಿಕೆ ದರ ಜೂನ್‌ನಲ್ಲಿ ₹50,000ದ ಗಡಿ ದಾಟಿತ್ತು. ಕೆಲ ದಿನಗಳಿಂದ ₹55,000ದ ಆಸುಪಾಸಿನಲ್ಲಿದ್ದ ದರ ಈಗ ₹56,399ಕ್ಕೆ ಏರಿದೆ.

'ಇದು ವರ್ಷದ ಉತ್ತಮ ದರ. ಕೆಲ ದಿನಗಳಿಂದ ₹55,000 ಇದ್ದ ದರ ಸದ್ಯ ಏರಿಕೆ ಕಂಡಿದ್ದು ಆಶಾದಾಯಕ. ಈ ದರ ಮುಂದುವರಿಯುವ ಸಾಧ್ಯತೆ ಇದೆ' ಎಂದು ತೋಟ ಉತ್ಪನ್ನಗಳ ಮಾರಾಟ ಸಂಘದ ಅಧ್ಯಕ್ಷ ಎಂ.ಆರ್. ರವಿ ಹೇಳಿದರು.